ಪಕ್ಷಿಗಳಿಗೆ, ಬಾವಲಿಗಳಿಗೆ ತಾಣವಾಗಿತ್ತು ಮತ್ತು ನೆರಳು ಕೊಡುತ್ತಾ ಇತ್ತು. ಅದರಿಂದ ಯಾರಿಗೂ ತೊಂದರೆಯಾಗಿರಲಿಲ್ಲ. ಈಗ ಮರಗಳನ್ನು ಕಡಿಯುವುದಿಲ್ಲವೆಂದು ತಾವು ಆಶ್ವಾಸನೆಯನ್ನು ಕೊಡಬೇಕು.

SRI ROSHAN BAIG: I will get a detailed report.

MR.SPEAKER:- No, please ask your officer not to touch those trees. Kindly do that much.

ಶ್ರೀ ಎಸ್.ಸುರೇಶ್‌ಕುಮಾರ್:- ಮೊನ್ನೆ ಇದೇ ಸದನದಲ್ಲಿ ಮಾನ್ಯ ಗೃಹ ಸಚಿವರು ಆಶ್ವಾಸನೆಯನ್ನು ಕೊಟ್ಟರು. ಪತ್ರಕರ್ತರಿಗೆ ಫೋನ್ ಮತ್ತು ರೂಮ್ ಕೊಡುತ್ತೇವೆಂದು ಹೇಳಿದ್ದರು. ಈಗ ಕಮೀಷನರ್‌ರವರು ಲೆಟರ್ ಬರೆದು ರೂಮ್ ಕೊಡುವಂತಹ ವಿಚಾರದಲ್ಲಿ ಕೊಡುವುದಿಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ಕೂಡ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಆರ್.ರೋಷನ್‌ಬೇಗ್:- ಈಗ ತಾನೇ ನನಗೆ.....

ಅಧ್ಯಕ್ಷರು:- ವರದಿಯನ್ನು ಸಭೆಯ ಮುಂದಿಡುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಮಂತ್ರಿಯವರು ಹೇಳಿದ್ದುದು ನಿಮಗೆ ಗೊತ್ತಾಯಿತೇ?

ಶ್ರೀ ಆರ್.ರೋಷನ್‌ಬೇಗ್:- ಅವರು ಈಗ ತಾನೇ ನನಗೆ ಹೇಳಿದ್ದಾರೆ. ನಾನು ಅದರ ಬಗ್ಗೆ ಮಾಹಿತಿ ತೆಗೆದುಕೊಂಡು ತಮಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸ್ನೇಹಿತರಾದ ಶ್ರೀ ರೋಷನ್‌ಬೇಗ್‌ರವರು ಏನು ಹೇಳಿದರೋ ಎಂದು ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು:- ನೀವು ಊಟಕ್ಕೆ ಬಂದಾಗ ಬನ್ನಿ, ನನಗೆ ಅರ್ಥವಾಗಿದೆ, ನಿಮಗೆ ನಾನು ಆಗ ಹೇಳುತ್ತೇನೆ.

4. ವರದಿಗಳನ್ನೊಪ್ಪಿಸುವುದು.

ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ):- ಮಾನ್ಯ ಅಧ್ಯಕ್ಷರೆ, ನಾನು ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ವಿಷಯ ಸಮಿತಿಯ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನೊಪ್ಪಿಸಲಾಯಿತು.

5. ಅರ್ಜಿಯನ್ನು ಒಪ್ಪಿಸುವುದು.

ಅಧ್ಯಕ್ಷರು:- (ಶ್ರೀ ಪಿ.ಸಿ.ಸಿದ್ದನಗೌಡರ್ ಪರವಾಗಿ):- ಸವದತ್ತಿ ನಗರ ಒಳಚರಂಡಿ

ವ್ಯವಸ್ಥೆಯ ಬಗ್ಗೆ ಸವದತ್ತಿ ಯಲ್ಲಮ್ಮ ನಗರಸಭೆಯ ಅಧ್ಯಕ್ಷರು ನೀಡಿರುವ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

6. ನಿಯಮ 351ರ ಮೇರೆಗೆ.

ವಿಷಯ: (ಅ) ಮಂಡಲ್ ಪಂಚಾಯತ್ ನೌಕರರಿಗೆ ಬಡ್ತಿ.

+ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯತ್ ಕಾರ್ಯದರ್ಶಿ ಕಂ-ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಲ್ಲಿ ಹಿಂದಿನ ಗ್ರಾಮ ಮಂಡಲ ಪಂಚಾಯತಿ ನೌಕರರಿಗೆ ಮೀಸಲಿರಿಸಿರುವ ಶೇ.20ರಷ್ಟು ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸದರಿ ನೌಕರರನ್ನು ನೇಮಕಾತಿ ಮಾಡುವ ಬಗ್ಗೆ ಸರ್ಕಾರದ ಪತ್ರದ ನಂ.ಗ್ರಾಮ. ಆ.ಸಂ. 350 ಜೆಡ್ ಪಿ.ಟಿ 94 ದಿನಾಂಕ 8.8.95ರ ಪ್ರಕಾರ ಕಳೆದ ಹತ್ತು ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿರುವ ನೌಕರರಿಗೆ ಕಾರ್ಯದರ್ಶಿ ಕಂ ದ್ವಿತೀಯ ದರ್ಜೆ ಸಹಾಯಕರಾಗಿ ಮುಂಬಡ್ತಿ ನೀಡಿ ನೇಮಕಾತಿ ಮಾಡಲಾಗುವುದೆಂದು ತಿಳಿಸಿದ್ದು. ಈ ಪ್ರಕಾರ ಮೇಲ್ಕಂಡ ಪತ್ರದ ರೀತ್ಯಾ ''31-7-95''ಕ್ಕೆ 10 ವರ್ಷ ತುಂಬಿದ ಹಾಗೂ ಅದಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿದ ನೌಕರರ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸಲು ಕೋರಿದ್ದು, ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಂಡು ನೇಮಕಾತಿ ಮಾಡಿರುತ್ತಾರೆ. ಉಳಿದ ''ಸಾಮಾನ್ಯ ವರ್ಗದ'' ಅಭ್ಯರ್ಥಿಗಳನ್ನು ನೇಮಕಾತಿ ಮಾಡದೆ ಪ್ರಸ್ತಾವನೆಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಹಿಂದಿರುಗಿಸಿ ದಿನಾಂಕ 21-5-96ರ ಸರ್ಕಾರಿ ಆದೇಶದ ಸಂಖ್ಯೆ ಗ್ರಾಮ. ಅ.ಪ.95 ಜೆಡ್.ಪಿ.ಟಿ. 94 ದಿನಾಂಕ: 16-7-94ರ ರೀತ್ಯ 31-12-93 ಮತ್ತು ಅದಕ್ಕೂ ಮೊದಲು ಸೇರಿರುವ ''ಸಾಮಾನ್ಯ ವರ್ಗದ'' ಅಭ್ಯರ್ಥಿಗಳ ಪ್ರಸ್ತಾವನೆಗಳನ್ನು ಏನು ಕೇಳಿರುತ್ತಾರೆ. ಇದರಿಂದಾಗಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ತೊಂದರೆಯಾಗಿದ್ದು ಮೇಲ್ಕಂಡ ಮೊದಲನೇ ಸರ್ಕಾರದ ಆದೇಶದ ಸಂಖ್ಯೆ ಗ್ರಾ.ಅಂ.ಪಂ.350 ಜೆಡ್.ಪಿ.ಟಿ.94 ದಿನಾಂಕ 8-8-95ರ ಪ್ರಕಾರ 31-7-95ಕ್ಕೆ 10 ವರ್ಷ ತುಂಬಿದ ನೌಕರರ ಪ್ರಸ್ತಾವನೆಗಳನ್ನು ಕೋರಿ ಇದರಂತೆ ಸೇವಾ ಅವಧಿಯನ್ನು ಮೊದಲಿನ ಆದೇಶದಂತೆ 31-7-95ಕ್ಕೆ ವಿಸ್ತರಿಸಲು ಕೋರಲಾಗಿದೆ.

ಶ್ರೀ ಎಂ.ಸಿ. ನಾಣಯ್ಯ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅಡಿಯಲ್ಲಿ ರಾಜ್ಯದಲ್ಲಿ ರಚಿತವಾಗಿರುವ ಒಟ್ಟು 5673 ಗ್ರಾಮ ಪಂಚಾಯಿತಿಗಳಲ್ಲಿ 6000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ 3707 ಗ್ರಾಮ ಪಂಚಾಯಿತಿಗಳಿಗೆ ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.